ದಿಃ **01-04-2024** ರಂದು ಸಾಕ್ಷಿಧಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು

ಮುಂದುವರೆದ ಮುಖ್ಯ ವಿಚಾರಣೆ ಅರ್ಜಿದಾರ ಪರ ಶ್ರೀ. ಬಿ ಸಿ ಕೆ ವಕೀಲರಿಂದ

ನಾನು ಈ ಪ್ರಕರಣದಲ್ಲಿ ಅರ್ಜಿದಾರ ಪರ ಸಾಕ್ಷಿಯಿದ್ದು, ನನ್ನ ಮುಖ್ಯ ವಿಚಾರಣೆಯ ಸಾಕ್ಷಿಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದ ವಿಷಯಗಳು ನನಗೆ ತಿಳಿದಿವೆ ಮತ್ತು ಸತ್ಯವಾಗಿವೆ.

ಪಾಟೀ ಸವಾಲುಃ ಎದುರುದಾರ ಪರ ಶ್ರೀ.ಎಸ್ ಟಿ ಕೆ ವಕೀಲರಿಂದಃ

ನಾನು ವ್ಯವಸಾಯ ಮಾಡುತ್ತೇನೆ. ವ್ಯವಸಾಯ ಹೊರತುಪಡಿಸಿ ಬೇರೆ ಯಾವುದೇ ಕೆಲಸ ಮಾಡುವುದಿಲ್ಲ. ನಾನು ಕೃಷಿ ಅಲ್ಲದೇ ಸಮಾಜದಲ್ಲಿ ಕಷ್ಟ ಬಂದಾಗ ಸಹಾಯಕ್ಕೆ ಹೋಗುತ್ತೇನೆ ಮತ್ತು ಒಂದು ಪಕ್ಷದಲ್ಲಿ ಕಾರ್ಯಕರ್ತನಾಗಿ ಕೆಲಸ ಮಾಡುತ್ತೇನೆ ಎಂದರೆ ಸರಿ. ಈ ಪ್ರಕರಣದ ಮೃತ ಉಮೇಶ ಚಿಕ್ಕೇರಿ ನಮ್ಮ ಊರಿನವರು. ಅವರು ನನ್ನ ದೂರದ ಸಂಬಂಧಿ ಎಂದರೆ ಅಲ್ಲ. ಆ ದಿನ ನಾನು ಹುಬ್ಬಳ್ಳಿಗೆ ಹೊರಟಿದ್ದೆ. ಸಂಜೆ **6-10** ಕ್ಕೆ ನಾನು ಹಾನಗಲ್ ನಿಂದ ಹೊರಟಿದ್ದೆ. ನನ್ನ ತಂದೆ ಹುಬ್ಬಳ್ಳಿ ಆಸ್ಪತ್ರೆಯಲ್ಲಿ ದಾಖಲಾಗಿದ್ದ ಕಾರಣ ಅವರನ್ನು ನೋಡಲು ಹೊರಟಿದ್ದೆ. ಅಪಘಾತಪಡಿಸಿದ ಬಸ್ಸು ಯಾವ ಡಿಪೋದ್ದು ಎಂದು ಗೊತ್ತಿಲ್ಲ. ಬಸ್ಸು ಸಂಖ್ಯೆಗೊತ್ತಿದೆ. ಬಸ್ಸು ಸಂಖ್ಯೆ ಕೆಎ-**21**/ಎಫ್ **0246** ಆಗಿದೆ. ಬಸ್ಸು ಹುಬ್ಬಳ್ಳಿಗೆ ಹೋಗುತ್ತಿದ್ದ ಕಾರಣ ನಾನು ಬಸ್ಸನ್ನು ಹತ್ತಿದ್ದೆ. ಬಸ್ಸಿನ ಒಳಗೆ ರಶ್ ಇರಲಿಲ್ಲ. ಎಲ್ಲ ಪ್ರಯಾಣಿಕರು ಕುಳಿತಿದ್ದರು. ನಾನು ಮುಂಭಾಗದಲ್ಲಿ ಕುಳಿತಿದ್ದೆ. ನಾನು ಡ್ರೈವರನ ಎಡಗಡೆ ಮೊದಲ ಸೀಟಿನಲ್ಲಿ ಕುಳಿತಿದ್ದೆ. ಮಾಸನಕಟ್ಟಿಯಿಂದ ಹಾನಗಲ್ ಕಡೆಗೆ ಬರುವಾಗ ಒಂದು ತಿರುವು ಇರುವ ಜಾಗದಲ್ಲಿ ಅಪಘಾತವಾಗಿದೆ. ಮಾಸನಕಟ್ಟಿಯಿಂದ ಹಾನಗಲ್ ಕಡೆಗೆ ಬರುವಾಗ ರಸ್ತೆಯ ಬಲಭಾಗದಲ್ಲಿ ಒಂದು ಕೆರೆ ಇದ್ದು ಅದರ ಕಟ್ಟೆಯ ಸಮೀಪ ತಿರುವಿನಲ್ಲಿ ಅಪಘಾತವಾಗಿದೆ. ಸದರಿ ಜಾಗದಲ್ಲಿ ಮಾಸನಕಟ್ಟಿಯಿಂದ ಹಾನಗಲ್ ಕಡೆಗೆ ಬರುವಾಗ ರಸ್ತೆ ಇಳಿಮುಖವಾಗಿದೆ ಎಂದರೆ ಸರಿ. ಸದರಿ ಜಾಗದಲ್ಲಿ ರಸ್ತೆ ಇಳಿಮುಖವಾಗಿ ತಿರುವಿನಿಂದ ಇರುವ ಕಾರಣ ಹಾಗೂ ಸಾಕಷ್ಟು ಅಗಲವಾಗಿರುವ ಕಾರಣ ಬೈಕುಗಳು ವೇಗವಾಗಿ ಬರುತ್ತವೆ ಎಂದರೆ ಗೊತ್ತಿಲ್ಲ.

**2.** ನಾನು ಬೈಕನ್ನು ಸುಮಾರು 25 ಮೀಟರ್ ದೂರದಿಂದ ನೋಡಿದ್ದೇನೆ. ಆ ಸಮಯದಲ್ಲಿ ಒಂದೇ ಬೈಕು ಬರುತ್ತಿತ್ತು. ಹಾನಗಲ್ ಬಂಕಾಪೂರ ರಸ್ತೆಯು ದ್ವಿಪಥ ರಸ್ತೆ ಎಂದರೆ ಸರಿ. ಸದರಿ ರಸ್ತೆಯಲ್ಲಿ ಒಂದು ಬಸ್ಸು ಮತ್ತು ಬೈಕು ಸರಾಗವಾಗಿ ಓಡಾಡಬಹುದು ಎಂದರೆ ಸರಿ. ಆ ದಿನ ಮೃತ ಉಮೇಶ ಚಿಕ್ಕೇರಿ ಬೈಕನ್ನು ಮದ್ಯ ಸೇವನೆ ಮಾಡಿಕೊಂಡು ಅತೀ ವೇಗವಾಗಿ ಚಲಾಯಿಸಿ ಸ್ವತಃ ಬಸ್ಸಿಗೆ ಡಿಕ್ಕಿಪಡಿಸಿದ್ದಾನೆ ಎಂದರೆ ಸರಿಯಲ್ಲ. ಮೃತ ಉಮೇಶ ಚಿಕ್ಕೇರಿ ಮತ್ತು ಅವನ ಕುಟುಂಬದವರು ಚಿಕ್ಕ ವಯಸ್ಸಿನಿಂದಲೂ ನನಗೆ ಪರಿಚಯ. ಮೃತ ಉಮೇಶ ಚಿಕ್ಕೇರಿ ಎಲ್ಲಿ ಕೆಲಸ ಮಾಡುತ್ತಿದ್ದ ಎಂದು ಗೊತ್ತಿಲ್ಲ. ಬೈಕು ಉಮೇಶ ಚಿಕ್ಕೇರಿಯ ಹೆಸರಿನಲ್ಲಿತ್ತು. ಆತನ ಬಳಿ ಡಿ ಎಲ್ ಇತ್ತು. ಮೃತ ಉಮೇಶ ಚಿಕ್ಕೇರಿ ಚಲಾಯಿಸುತ್ತಿದ್ದ ಬೈಕಿಗೆ ವಿಮೆ ಇತ್ತು. ಪೊಲೀಸರು ಮೃತ ಉಮೇಶ ಚಿಕ್ಕೇರಿಯ ತಪ್ಪಿನಿಂದ ಅಪಘಾತವಾಗಿದೆ ಎಂದು ಆತನನ್ನು 1 ನೇ ಆರೋಪಿಯನ್ನಾಗಿ ಕಾಣಿಸಿ ಅಂತಿಮ ವರದಿ ಸಲ್ಲಿಸಿದ್ದಾರೆ ಎಂದರೆ ಆ ಬಗ್ಗೆ ಗೊತ್ತಿದೆ. ಉಮೇಶ ಚಿಕ್ಕೇರಿಯ ವಿರುದ್ಧ ಸಲ್ಲಿಸಿರುವ ದೋಷಾರೋಪಣ ಪತ್ರವನ್ನು ಪ್ರಶ್ನಿಸಲು ನೀವು ಅರ್ಜಿದಾರರಿಗೆ ಸಲಹೆ ಕೊಟ್ಟಿದ್ದೀರಾ ಎಂದರೆ ಇಲ್ಲ. ಸದರಿ ಅಂತಿಮ ವರದಿಯನ್ನು ಪ್ರಶ್ನಿಸುವಂತೆ ಅರ್ಜಿದಾರರಿಗೆ ಸಲಹೆ ನೀಡಲು ನಿಮಗೆ ತೊಂದರೆ ಇತ್ತೇ ಎಂದರೆ ತೊಂದರೆ ಇರಲಿಲ್ಲ. ಆ ದಿನ ಮೃತ ಉವೇಶ ಚಿಕ್ಕೇರಿ ಮದ್ಯ ಸೇವನೆ ಮಾಡಿ ಬೈಕನ್ನು ಅತೀ ವೇಗ ಮತ್ತು ನಿರ್ಲಕ್ಷ್ಯತನದಿಂದ ಚಲಾಯಿುಸಿ ಸ್ವತಃ ಬಸ್ಸಿಗೆ ಅಪಘಾತಪಡಿಸಿದ್ದರೂ ಕೂಡ ಅರ್ಜಿದಾರರು ನನ್ನ ಪರಿಚಯಸ್ಥರು, ಊರಿನವರು ಹಾಗೂ ನನ್ನ ಸಂಬಂಧಿಕರಾದ ಕಾರಣ ಅವರಿಗೆ ಪರಿಹಾರಕ್ಕೆ ಅನುಕೂಲವಾಗಲಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಸಾಕ್ಷಿ ನುಡಿಯಲು ನ್ಯಾಯಾಲಯದಿಂದ ನನಗೆ ನೋಟೀಸು ಬಂದಿಲ್ಲ. ಅರ್ಜಿದಾರರು ಈ ಪ್ರಕರಣದಲ್ಲಿ ಸಾಕ್ಷಿ ನುಡಿಯಲು ಬರುವಂತೆ ಕೇಳಿಕೊಂಡಿದ್ದರಿಂದ ನಾನು ಸಾಕ್ಷಿ ನುಡಿಯಲು ಬಂದಿದ್ದೇನೆ ಎಂದರೆ ಸರಿಯಲ್ಲ. ಅಪಘಾತ ನೋಡಿದ್ದರಿಂದ ಸಾಕ್ಷಿ ನುಡಿಯುತ್ತಿದ್ದೇನೆ.

<u>ಮರುವಿಚಾರಣೆ ಇಲ್ಲಃ</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.
**Sd/-**
ಹಿರಿಯ ಸಿವಿಲ್ ನ್ಯಾಯಾಧೀಶರು
ಹಾನಗಲ್